International Journal of Kannada Research 2024; 10(1): 161-163

International Journal of Kannada Research
www.kannadajournal.com

ISSN: 2454–5813
IJKR 2024; 10(1): 161-163
© 2024 IJKR
www.kannadajournal.com
Received: 01-11-2023
Accepted: 06-12-2023

**ಡಾ. ನಾಗಣ್ಣ ಡಿ. ಎ.**
ಕನ್ನಡ ಸಹಾಯಕ ಪ್ರಾಧ್ಯಾಪಕ,
ಎಸ್. ಡಿ. ಎಂ.
ಕಾಲೇಜು(ಸ್ವಾಯತ್ತ), ಉಜಿರೆ,
ದಕ್ಷಿಣ ಕನ್ನಡ, ಕರ್ನಾಟಕ, ಭಾರತ

**Corresponding Author:**
**ಡಾ. ನಾಗಣ್ಣ ಡಿ. ಎ.**
ಕನ್ನಡ ಸಹಾಯಕ ಪ್ರಾಧ್ಯಾಪಕ,
ಎಸ್. ಡಿ. ಎಂ.
ಕಾಲೇಜು(ಸ್ವಾಯತ್ತ), ಉಜಿರೆ,
ದಕ್ಷಿಣ ಕನ್ನಡ, ಕರ್ನಾಟಕ, ಭಾರತ

# ಕೊಡಗಿನ 'ಕಾವೇರಿ ಸಂಕ್ರಮಣ'

**ಡಾ. ನಾಗಣ್ಣ ಡಿ. ಎ.**

**ಪೀಠಿಕೆ**

ಕೊಡಗು ಪ್ರಾಕೃತಿಕವಾಗಿ ಹಾಗೂ ಭೌಗೋಳಿಕವಾಗಿ ಹೊರಜಗತ್ತಿಗೆ ಗುರುತಿಸಿ ಕೊಳ್ಳುವುದರ ಜತೆ ಜತೆಗೆ ಸಾಂಸ್ಕೃತಿಕವಾಗಿಯೂ ಪ್ರಾಮುಖ್ಯತೆಯನ್ನು ಹೊಂದಿದೆ ಎಂದು ಹೇಳಬಹುದು. 'ಕೊಡಗು' ಎಂಬ ಪದವನ್ನು ಉಚ್ಚರಿಸಿದಾಗಲೋ ಅಥವಾ ಕೇಳಿದಾಗಲೋ ಒಂದು ಆಕರ್ಷಣೆಯ ಹಿನ್ನೆಲೆಯಲ್ಲಿ ಗ್ರಹಿಸುವ ಪ್ರಯತ್ನ ನಡೆದಿದೆ. ಕರ್ನಾಟಕದ ಯಾವುದೇ ಜಿಲ್ಲೆಯ ಹೆಸರನ್ನು ಗುರುತಿಸುವುದಕ್ಕಿಂತ ಬಹಳ ಭಿನ್ನವಾಗಿ ಇಡೀ ಜಿಲ್ಲೆಯನ್ನು ಕ್ರೂಢೀಕರಿಸಿ 'ಕೊಡಗು' ಅಥವಾ 'ಕೂರ್ಗ್' ಎಂಬ ಹೆಸರುಗಳಿಂದ ಕರೆಯಲಾಗುತ್ತಿದೆ. ಇದಕ್ಕೆ ಇಲ್ಲಿನ ಸಾಂಸ್ಕೃತಿಕ ವೈವಿಧ್ಯತೆ, ಜನಸಮುದಾಯ, ಭಾಷೆ, ಪ್ರಾಕೃತಿಕ ಲಕ್ಷಣಗಳು ಕಾರಣವಾಗಿವೆ. ಕೊಡಗಿನಲ್ಲಿ ಹುತ್ತರಿ, ಕೈಲ್ ಪೊಳ್ದ್, ತುಲಾ ಸಂಕ್ರಮಣ ಮೊದಲಾದ ತನ್ನದೇ ಆದ ಅನನ್ಯತೆಗಳನ್ನು ಹೊಂದಿರುವ ಹಬ್ಬಗಳನ್ನು ಆಚರಿಸಲಾಗುತ್ತದೆ. ಈ ಲೇಖನದಲ್ಲಿ ತುಲಾಸಂಕ್ರಮಣ ಹಬ್ಬವನ್ನು ಕುರಿತು ವಿವೇಚಿಸಲಾಗಿದೆ.

ಕೊಡವರು ಆಚರಿಸುವ ಪ್ರಮುಖ ಹಬ್ಬಗಳಲ್ಲಿ 'ಕಾವೇರಿ ಸಂಕ್ರಮಣ' ಅಥವಾ 'ತುಲಾಸಂಕ್ರಮಣ'ವೂ ಒಂದು. ಇದು 'ಕಾವೇರಿ ಜಯಂತಿ' ಎಂಬುದು ಕೊಡವರ ಪರಂಪರಾಗತ ನಂಬಿಕೆಯಾಗಿದೆ.[೧] ಕೊಡಗಿನ ಜೀವನದಿಯೆನಿಸಿರುವ ಕಾವೇರಿ ನದಿಯಾಗಿ ಹರಿದು ಹೋಗುವಾಗ ನೀಡಿದ ವಚನದಂತೆ ಪ್ರತಿವರ್ಷ ತೀರ್ಥರೂಪದಲ್ಲಿ ಉದ್ಭವಿಸುವ ಸಂಭ್ರಮದ ದಿನವೇ ಕಾವೇರಿ ಸಂಕ್ರಮಣದ ಆಚರಣೆ. ದಕ್ಷಿಣ ಕನ್ನಡದಲ್ಲಿ ಇದನ್ನು 'ಕಾವೋರಿ ಸಂಕ್ರಾಂತಿ'[೨] ಎಂಬ ಹೆಸರಿನಲ್ಲಿ ಆಚರಿಸಲಾಗುತ್ತದೆ. ಪ್ರತಿವರ್ಷ ತುಲಾ ಸಂಕ್ರಮಣದ ಸಮಯದಲ್ಲಿ ತಲಕಾವೇರಿಯಲ್ಲಿರುವ ಕಾವೇರಿ ನದಿಯ ಉಗಮಸ್ಥಳ (ಕುಂಡಿಕೆ) ದಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿ ಕೊಡವರು ಆರಾಧಿಸುವ ಕಾವೇರಿ ಮಾತೆ ಆವಿರ್ಭವಿಸುತ್ತಾಳೆ ಎಂಬ ನಂಬಿಕೆ ಇಂದಿಗೂ ಇದೆ. ಅಲ್ಲದೆ ಕಾವೇರಿ ನದಿಯು ತುಲಾಸಂಕ್ರಮಣದ ದಿನಗಳಲ್ಲಿ ಕೊಡಗಿನ ಎಲ್ಲ ಬಾವಿ, ಕೆರೆ, ಹಳ್ಳ, ಹೊಳೆಗಳಲ್ಲಿ ಅಗೋಚರವಾಗಿ ಉಕ್ಕಿ ಹರಿಯುತ್ತಾಳೆ ಎಂಬುದು ಕೊಡವರ ಮತ್ತೊಂದು ನಂಬಿಕೆಯಾಗಿದೆ.[೩]

ಭಾರತದಾದ್ಯಂತ ಜನವರಿ ೧೪ ಅಥವಾ ೧೫ ರಂದೇ ಆಚರಿಸಲ್ಪಡುವ ಸಂಕ್ರಾಂತಿ ಹಬ್ಬದ ಹಾಗೆಯೆ ಕೊಡವರ ಕಾವೇರಿ ಸಂಕ್ರಮಣವೂ ಅಕ್ಟೋಬರ್ ೧೭ ಅಥವಾ ೧೮ ರಂದು ನಿಗದಿತವಾಗಿ ಆಚರಿಸಲ್ಪಡುತ್ತದೆ. ಈ ಸಮಯದಲ್ಲಿ ಕಾವೇರಿ ನದಿಯಾಗಿ ಉಕ್ಕಿ ಹರಿಯುವ ಮೂಲಕ ಇಲ್ಲಿನ ಭಕ್ತರಿಗೆ ಕಾಣಿಸಿಕೊಳ್ಳುತ್ತಾಳೆಂಬ ನಂಬಿಕೆ ಇಲ್ಲಿನ ಜನರಲ್ಲಿದೆ. ಪ್ರತಿ ವರ್ಷ ಉದ್ಭವವಾಗುವ ಅವಧಿ ಆರು ಗಂಟೆಗಳ ಕಾಲ ಮುಂದೆ ಹೋಗುತ್ತದೆ. ಅಂದರೆ ಈ ಕಾಲಚಕ್ರದ ಕ್ರಮ ಒಂದು ಸುತ್ತು ಮುಗಿಯಲು ನಾಲ್ಕು ವರ್ಷಗಳು ಬೇಕಾಗುತ್ತದೆ. ಈ ಕಾರಣದಿಂದ ತಲಕಾವೇರಿಯಲ್ಲಿರುವ ಕುಂಡಿಕೆಯಿಂದ ಎರಡು ವರ್ಷ ಹಗಲು ಮತ್ತು ಎರಡು ವರ್ಷ ರಾತ್ರಿ ಸಮಯದಲ್ಲಿ ತೀರ್ಥೋದ್ಭವವಾಗುತ್ತದೆ.

ಕೊಡವರು ಹಬ್ಬದ ದಿನ ಹೆಚ್ಚಿನ ಸಂಖ್ಯೆಯಲ್ಲಿ ತಲಕಾವೇರಿಗೆ ಹೋಗುತ್ತಾರೆ. ವಿವಾಹವಾದ ದಂಪತಿಗಳು ಒಂದು ವರ್ಷದೊಳಗೆ ಕಾವೇರಿ ಕ್ಷೇತ್ರಕ್ಕೆ ಬಂದು ತ್ರಿವೇಣಿ ಸಂಗಮ, ತಲಕಾವೇರಿ ಕುಂಡಿಕೆಗಳಲ್ಲಿ ತೀರ್ಥಸ್ನಾನ ಮಾಡುವುದು ಮತ್ತು ಹಿರಿಯರಿಗೆ ಪಿಂಡ ಇಟ್ಟು ತೊಟ್ಟ ದೀಕ್ಷೆಯನ್ನು ಕಳಚುವುದು ಕೊಡವರು ರೂಢಿಸಿಕೊಂಡಿರುವ ಧಾರ್ಮಿಕ ನಿಯಮಗಳಾಗಿವೆ. ಈ ನಿಯಮಗಳಿಗನುಸಾರವಾಗಿ ಇಂದೂ ಕೂಡ ಕೊಡವರು ನಡೆದುಕೊಳ್ಳುತ್ತಿರುವುದನ್ನು ಕಾಣಬಹುದು. ಭಾರತೀಸುತರ ಹುಲಿಯ ಹಾಲಿನ ಮೇವು[೪] ಮತ್ತು ಬೆಳ್ಳಿಮೂಡಿತು[೫] ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಪಾತ್ರಗಳಲ್ಲಿ ಕೊಡವರ ಸಾಮಾಜಿಕ ಹಾಗೂ ಧಾರ್ಮಿಕ ವಿದಿವಿಧಾನಗಳು ಪ್ರಸ್ತುತ ಸಮಯದಲ್ಲಿಯೂ ಆಚರಣೆಯಲ್ಲಿರುವಂತೆ ಚಿತ್ರಣಗೊಂಡಿವೆ.

ಕಾವೇರಿ ಸಂಕ್ರಮಣದ ದಿನ ಒಂದು ನಿರ್ದಿಷ್ಟ ಸಮಯದಲ್ಲಿ ತೀರ್ಥೋದ್ಭವವಾಗುತ್ತದೆ. ಕೆಲವೊಮ್ಮೆ ರಾತ್ರಿ ಕೆಲವೊಮ್ಮೆ ಮುಂಜಾನೆ ಹೀಗೆ ಬೇರೆ ಬೇರೆ ಸಮಯದಲ್ಲಿ ಉದ್ಭವವಾಗುತ್ತದೆ. ಈ ಸಮಯದಲ್ಲಿ ಭಕ್ತರು ರಾಜ್ಯದ ನಾನಾ ಭಾಗಗಳಿಂದ ಉತ್ಸುಕತೆಯಿಂದ ಬಂದು ಸೇರುತ್ತಾರೆ. ತಲಕಾವೇರಿಯಲ್ಲಿರುವ ಕುಂಡಿಕೆಯ ಮುಂದಿರುವ ಕೊಳದ ಸುತ್ತಲೂ ನಿಂತ ಜನರು ತೀರ್ಥೋದ್ಭವವಾದದ್ದನ್ನು ನೋಡಿ ಅಥವಾ ವಿಷಯವನ್ನು ತಿಳಿದುಕೊಂಡು ಅತ್ಯಂತ ಭಕ್ತಿ ಭಾವದಿಂದ ಕೊಳದಲ್ಲಿ ಮುಳುಗಿ ಪುನೀತರಾಗುವ ಉತ್ಸಾಹ ತೋರುತ್ತಾರೆ. ನೀರಿನಲ್ಲಿ ಮುಳುಗೆದ್ದವರು ಕುಂಡಿಕೆಯ ಹತ್ತಿರ ತೆರಳಿ ಪುರೋಹಿತರಿಂದ ತೀರ್ಥರೂಪದಲ್ಲಿ ಅಲ್ಲಿಯ ನೀರನ್ನು ಮೈಮೇಲೆ ಹಾಕಿಸಿಕೊಳ್ಳುತ್ತಾರೆ. ತುಲಾ ಸಂಕ್ರಮಣದ ಶುಭಮುಹೂರ್ತದಲ್ಲಿ ಭಾಗವಹಿಸಿದ ಭಕ್ತರು ಹಿಂತಿರುಗಿ ಬರುವಾಗ ಭಾಗಮಂಡಲದಲ್ಲಿರುವ ಭಗಂಡೇಶ್ವರ ದೇವರನ್ನು ಪೂಜಿಸುವುದು ಕೊಡವರ ದೃಷ್ಟಿಯಲ್ಲಿ ಬಹಳ ಮುಖ್ಯ. ಈ ಸುಸಂದರ್ಭದಲ್ಲಿ ತಲಕಾವೇರಿಗೆ ಹೋಗಲು ಅನಾನುಕೂಲವಾದವರು ಹರಿಶ್ಚಂದ್ರ ಅಥವಾ ಬಲಮುರಿಗೆ ನಂತರದ ದಿನಗಳಲ್ಲಿ ಹೋಗಿಬರಬಹುದು. ಒಂದು ವೇಳೆ ಕಾವೇರಿ ಸಂಕ್ರಮಣ ದಿನ ತಲಕಾವೇರಿಗೆ ಹೋಗಲು ಸಾಧ್ಯವಾಗದವರು ವೃಶ್ಚಿಕ ಸಂಕ್ರಮಣದವರೆಗೂ ಹೋಗುತ್ತಿರುತ್ತಾರೆ.

**ಆಚರಣಾ ವಿಧಾನ:** ಕೊಡಗಿನಾದ್ಯಂತ ಕೊಡವರೊಂದಿಗೆ ಬೇರೆ ಬೇರೆ ಸಮುದಾಯದವರೂ ಎರಡು ದಿನಗಳ ಕಾಲ ಈ ಹಬ್ಬವನ್ನು ಆಚರಿಸುತ್ತಾರೆ. ಬಹಳ ಮುಖ್ಯವಾಗಿ ಕೆಂಬಟ್ಟಿ ಸಮುದಾಯದವರೂ ಕೊಡವರಷ್ಟೇ ಸಂಪ್ರದಾಯಬದ್ಧವಾಗಿ ಆಚರಿಸುವುದನ್ನು ಕಾಣಬಹುದು. ಹಬ್ಬದ ಮೊದಲ ದಿನ ಅಂದರೆ ತೀರ್ಥೋದ್ಭವದ ದಿನ ಎಲ್ಲರೂ ತಮ್ಮ ಮನೆ, ಭೂಮಿ, ತೋಟ ಹೀಗೆ ಪ್ರತಿಯೊಂದಕ್ಕೂ 'ಬೊತ್ತ್'(ನಿಶಾನೆ) ಹಾಕುವುದು ಕಡ್ಡಾಯವಾಗಿರುತ್ತದೆ. ಬಿದಿರನ್ನು ಒಡೆದು ಸುಮಾರು ನಾಲ್ಕು ಅಡಿಗಳ ಉದ್ದದ ದಬ್ಬೆಗಳನ್ನು ಮಾಡಿ ಆ ಎರಡು ದಬ್ಬೆಗಳ ತುದಿಯನ್ನು ಒಡೆದು ಗದ್ದೆಯ ನಡುವಿನಲ್ಲಿ ಕತ್ತರಿ ಆಕಾರದಲ್ಲಿ ಚುಚ್ಚುತ್ತಾರೆ. ಅದಕ್ಕೆ 'ಕೈಬಳ ಬಳ್ಳಿ' ಎಂಬ ಒಂದು ಜಾತಿಯ ಬಳ್ಳಿಯನ್ನು ಸುರುಳಿಯಂತೆ ಮಾಡಿ ಹಾರದಂತೆ ಸುತ್ತಬೇಕು. ಇದೇ ದಿನ ಸಂಜೆ ಪ್ರತಿ ಮನೆಯಲ್ಲಿ 'ಕಣಿ ಪೂಜಿಸಲು'(ಕಾವೇರಿ ಮೂರ್ತಿ ರಚನೆಗೆ) ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ.

ತೀರ್ಥೋದ್ಭವದ ಮರುದಿನ ಬೆಳಿಗ್ಗೆ ಎಲ್ಲರೂ ಎದ್ದು ಸಾಧ್ಯವಾದರೆ ಹೊಸಬಟ್ಟೆಯನ್ನುಟ್ಟು ಶುಚಿಯಾಗಿಯಾಗಬೇಕು. (ಹಿಂದೆ ಕಡ್ಡಾಯವಾಗಿ ಹೊಸ ಬಟ್ಟೆ ಉಡಬೇಕಾಗಿತ್ತು) ಮನೆಯ ಹೆಂಗಸು 'ತಳಿಯಕ್ಕಿ ಬೊಳಕು' ತಯಾರಿಸಿ ಅದರ ಮೇಲೆ ಸೌತೆ ಕಾಯಿ ಅಥವಾ ಇತರೆ ಕಾಯಿಪಲ್ಯೆಗಳನ್ನಿಟ್ಟು ಸೇವಂತಿಗೆ ಹೂವಿನಿಂದ ಅಲಂಕರಿಸಿದ ಕಾವೇರಿ ಮೂರ್ತಿಯನ್ನು ಇಡಬೇಕು. ಆ ಪ್ರತಿಮೆಗೆ ಆಭರಣಗಳನ್ನು ತೊಡಿಸಿ ವೀಳ್ಯದೆಲೆ, ಅಕ್ಕಿ ತುಂಬಿದ ತಟ್ಟೆಯ ಮೇಲಿಟ್ಟು ಅಷ್ಟನ್ನೂ ನೆಲ್ಲಕ್ಕಿ ನಡುಬಾಡೆಯಲ್ಲಿಡುತ್ತಾರೆ. ಅನಂತರ ಕುಟುಂಬದ ಎಲ್ಲರೂ 'ತಳಿಯಕ್ಕಿ ಬೊಳಕು'ನಿಂದ ದೀಪ ಬೆಳಗುತ್ತಾರೆ. ಮೊದಲು ಮುತ್ತೈದೆಯರು ಬೆಳಗುವುದು ವಾಡಿಕೆ. ಈ ರೀತಿಯಲ್ಲಿ ಶೃಂಗರಿಸಿದ ಕಾವೇರಿ ಮಾತೆಯ ಮೂರ್ತಿಗೆ ಅಕ್ಕಿ ಹಾಕಿ ದೀಪ ಬೆಳಗಿಸಿ ಪೂಜಿಸುತ್ತಾರೆ. ಸಮೀಪದ ಬಂಧುಗಳು ಮತ್ತು ಮದುವೆಯಾಗಿ ಹೋದ ಹೆಣ್ಣು ಮಕ್ಕಳು ಈ ಹಬ್ಬಕ್ಕೆ ಬರಲೇ ಬೇಕಿತ್ತು. ಹೀಗೆ ಮೂರ್ತಿ ಪೂಜೆಯೆಲ್ಲಾ ಮುಗಿದ ನಂತರ ಸಮೀಪದ ನದಿಯಲ್ಲಿ ವಿಸರ್ಜಿಸುತ್ತಾರೆ ಅಥವಾ ಹಾಲು ಬರುವಂತಹ ಮರದ ಬುಡದಲ್ಲಿ ಇಡುವುದರ ಮೂಲಕ ಈ ಹಬ್ಬ ಪೂರ್ಣಗೊಳ್ಳುತ್ತದೆ.

ಕಾವೇರಿ ತೀರ್ಥೋದ್ಭವದ ಬಗ್ಗೆ ಸಾಕಷ್ಟು ಸಂದೇಹ, ಗೊಂದಲಗಳುಂಟು. ನಿಜವಾಗಿಯೂ ಆ ಸ್ಥಳದಲ್ಲಿ ನಿರ್ದಿಷ್ಟ ಸಮಯದಲ್ಲಿ ಕುಂಡಿಕೆಯಿಂದ ನೀರು ಉಕ್ಕಿ ಹರಿಯುತ್ತದೆಯೇ ಅಥವಾ ಜನರ ನಂಬಿಕೆಯೇ ಎಂಬುದು ಹಲವರ ಜಿಜ್ಞಾಸೆಗೆ ಕಾರಣವಾಗಿದೆ. ಭಾರತೀಸುತರ ಬೆಳ್ಳಿಮೂಡಿತು ಕಾದಂಬರಿಯಲ್ಲಿ ಕಾವೇರಿ ಸಂಕ್ರಮಣದ ದಿನ ಕುಂಡಿಕೆಯ ಹತ್ತಿರ ಕುತೂಹಲ ಮತ್ತು ಭಕ್ತಿಯಿಂದ ನೆರೆದಿದ್ದ ಜನಜಂಗುಳಿಯನ್ನು ಕುರಿತು "ತೀರ್ಥೋದ್ಭವವಾಯಿತು ಎಂದು ಘೋಷಿಸಿದರು. ಕೊಳದಲ್ಲಿ ನಿಂತ ಸಾವಿರ ಸಂಖ್ಯೆಯ ಯಾತ್ರಿಕರು ನೀರಲ್ಲಿ ಮುಳುಗು ಹಾಕತೊಡಗಿದರು. ಕುಂಡಿಕೆಯ ದಡದಲ್ಲಿ ನಿಂತ ಬ್ರಾಹ್ಮಣರು 'ದಕ್ಷಿಣೆ'ಗಳನ್ನು ಕೇಳಿಕೊಂಡು ಭಕ್ತರ ಮೈಮೇಲೆ ತೀರ್ಥಜಲವನ್ನು ಎರಚತೊಡಗಿದರು[೬] ಮತ್ತು 'ತೀರ್ಥ ಬಂತು, ತೀರ್ಥ ಬಂತು ಎಂದು ಪುರೋಹಿತರು ಕೂಗಿದರು'[೭] ಎಂಬ ವಿಚಾರಗಳನ್ನು ಗಮನಿಸಿದರೆ ಇಲ್ಲಿ ಪುರೋಹಿತರೇ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ ಎಂಬುದನ್ನು ಪರೋಕ್ಷವಾಗಿ ಹೇಳುತ್ತಿರುವಂತೆ ಕಾಣುತ್ತದೆ. ಬಹುಸಂಖ್ಯೆಯಲ್ಲಿ ನೆರೆದಿರುವ ಜನಸಮೂಹಕ್ಕೆ ಚಿಕ್ಕ ಕುಂಡಿಕೆಯಲ್ಲಿ ಏನಾಗುತ್ತಿದೆ ಎಂಬುದು ತಿಳಿಯುವ ಮೊದಲೇ ಈ ಎಲ್ಲಾ ಘಟನೆಗಳು ನಡೆದು ಹೋಗಿರುತ್ತವೆ. ಈ ರೀತಿಯ ಗೊಂದಲಗಳಿಗೆ ಡಾ. ಪಿ. ಎಸ್. ರಾಮನುಜಂ ಅವರು 'ಧಾರ್ಮಿಕವಾಗಿ ಈ ಪ್ರಕ್ರಿಯೆಗೆ ಪ್ರಾಮುಖ್ಯವಿದೆ. ಮತ್ತು ಭೌಗೋಳಿಕ ವಿಜ್ಞಾನಿಗಳು ಇದರ ವೈಜ್ಞಾನಿಕ ಕಾರಣಗಳನ್ನು ಕಂಡುಹಿಡಿದಿದ್ದಾರೆ. ಇದು ನಿಜವಾಗಿಯೂ ಸಂಭವಿಸುತ್ತದೆ. ಜೋತಿರ್ವಿಜ್ಞಾನದ ಮೂಲಕ ಇದನ್ನು ಕಂಡು ಹಿಡಿಯುತ್ತಾರೆ'[೮] ಎಂದು ಸ್ಪಷ್ಟಪಡಿಸುವ ಮೂಲಕ ಧಾರ್ಮಿಕ ಭಾವನೆಗಳಿಗೆ ಕುಂದುಂಟಾಗದಂತೆ ನೋಡಿಕೊಂಡಿದ್ದಾರೆ.

ಕೇರಳದ ಶಬರಿಮಲೆಯೂ ಸೇರಿದ ಹಾಗೆ ಭಾರತದಾದ್ಯಂತ ಇಂತಹ ನಂಬಿಕೆಗಳಿವೆ. ಇಲ್ಲಿ ಜನರ ನಂಬಿಕೆಯೇ ಮೂಲವಾಗಿದ್ದು ಅದಕ್ಕೆ ಯಾವ ವೈಜ್ಞಾನಿಕ ಕಾರಣವೂ ಅಗತ್ಯವಿಲ್ಲ. ಕೆಲವು ಆಚರಣೆಗಳ ಹಿಂದೆ ಒಂದು ವೈಜ್ಞಾನಿಕ ಕಾರಣವಿದ್ದೇ ಇರುತ್ತದೆ. ಆದರೆ ಎಲ್ಲಾ ಆಚರಣೆಗಳಿಗೂ ವೈಜ್ಞಾನಿಕ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದರೆ ಆಚರಣೆಯ ಹಿನ್ನೆಲೆಯೇ ನೀರಸವೆನಿಸಬಹುದು. ಏನೇ ಇರಲಿ ಇಂದಿನ ಆಧುನಿಕ ಯುಗದಲ್ಲೂ ಈ ರೀತಿಯ ಧಾರ್ಮಿಕ ಆಚರಣೆಗಳು ಶ್ರದ್ಧಾ ಭಕ್ತಿಯಿಂದ ನಡೆಯುತ್ತಿರುವುದು ಮನುಷ್ಯನ ನಂಬಿಕೆಯ ತಳಹದಿಯ ಮೇಲೆಯೇ ಎನ್ನುವುದು ಮಾತ್ರ ಸತ್ಯ.

**ಕೊನೆ ಟಿಪ್ಪಣಿಗಳು**


೧. ಶ್ರೀ ಕಾವೇರಿ ವೈಭವ, ಎದುರ್ಕಳ ಕೆ ಶಂಕರನಾರಾಯಣ ಭಟ್ಟ, ಶ್ರೀ ರಾಮಕೃಷ್ಣ ಪ್ರಕಾಶನ, ಭಾಗಮಂಡಲ, ೧೯೭೮, ಪುಟ–೪೪೩

೨. ತುಳುನಾಡಿನ ಆಚರಣೆಗಳು, ದಿವಾಕರ ಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೩, ಪುಟ–೧೩೮

೩. ಶ್ರೀ ಕಾವೇರಿ ವೈಭವ, ಎದುರ್ಕಳ ಕೆ ಶಂಕರನಾರಾಯಣ ಭಟ್ಟ, ಶ್ರೀ ರಾಮಕೃಷ್ಣ ಪ್ರಕಾಶನ, ಭಾಗಮಂಡಲ, ೧೯೭೮, ಪುಟ–೪೪೩

೪. ಹುಲಿಯ ಹಾಲಿನ ಮೇವು, ಭಾರತೀಸುತ, ರವೀಂದ್ರ ಪುಸ್ತಕಾಲಯ, ಸಾಗರ, ೨೦೦೮, ಪುಟ–೩೫, ೩೬

೫. ಬೆಳ್ಳಿ ಮೂಡಿತು, ಭಾರತೀಸುತ, ಮನ್ವಂತರ ಪ್ರಕಾಶನ, ಧಾರಾವಾಡ, ೧೯೬೨, ಪುಟ–೧೩೨

೬. ಅದೇ;, ಪುಟ–೧೪೪

೭. ಅವಳ ದಾರಿ, ಭಾರತೀಸುತ, ಸೌಮ್ಯ ಪ್ರಕಾಶನ, ಬೆಂಗಳೂರು, ೨೦೦೪, ಪುಟ–೧೯೪
೮. ಕೊಡವರು, ರಾಮಾನುಜಂ ಪಿ. ಎಸ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪, ಪುಟ–೧೦೭